JUNE 07, 2025

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**1.** ಧಾರವಾಡದ, ಗುಲಗಂಜಿಕೊಪ್ಪದ ಈದ್ಗಾ ಮೈದಾನ, ಹುಬ್ಬಳ್ಳಿಯ ಕಿತ್ತೂರು ಚನ್ನಮ್ಮ ವೃತ್ತದ ಈದ್ಗಾ ಸೇರಿದಂತೆ, ರಾಜ್ಯದ ವಿವಿಧೆಡೆ ಇಂದು, ತ್ಯಾಗ, ಬಲಿದಾನಗಳ ಸ್ಮರಣೆಯ, ಬಕ್ರೀದ್ ಹಬ್ಬವನ್ನು, ಮುಸ್ಲಿಂ ಬಾಂಧವರು, ಶ್ರದ್ಧಾ, ಭಕ್ತಿಯಿಂದ ಆಚರಿಸಿದ, ವರದಿಗಳು ಬಂದಿವೆ. ಪ್ರಾರ್ಥನಾ ಮಂದಿರ ಹಾಗೂ ಈದ್ಗಾ ಮೈದಾನಗಳಲ್ಲಿ, ಸಾಮೂಹಿಕ ಈದ್ ನಮಾಜ್ ಸಲ್ಲಿಸಿ, ಪರಸ್ಪರ ಶುಭಾಶಯ ವಿನಿಮಯಿಸಿಕೊಂಡರು. ದಾನ–ಧರ್ಮದಲ್ಲಿ ಪಾಲ್ಗೊಂಡು, ಸಹೋದರತ್ವ, ಸಹಬಾಳ್ವೆಯ ಮಾನವೀಯ ಮೌಲ್ಯಗಳನ್ನು ಸಾರಿದರು. ಲೋಕ ಕಲ್ಯಾಣಕ್ಕಾಗಿ, ಪ್ರಾರ್ಥನೆ ಸಲ್ಲಿಸಿದ್ದಾಗಿ, ಮುಸ್ಲಿಂ ಧರ್ಮಗುರು, ಮೌಲಾನಾ ಜಹೀರುದ್ದೀನ್ ಖಾಜಿ, ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ, ಪ್ರಾರ್ಥನೆ ಬಳಿಕ, ತಿಳಿಸಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸೇರಿದಂತೆ, ಅನೇಕ ಗಣ್ಯರು, ಮುಸ್ಲಿಂ ಬಂಧುಗಳಿಗೆ, ಬಕ್ರೀದ್ ಹಬ್ಬದ ಶುಭಾಶಯ ಕೋರಿದ್ದಾರೆ.

<><><>

**2.** ಚಿಕ್ಕಬಳ್ಳಾಪುರ ಜಿಲ್ಲೆಯ, ನಂದಿ ಗಿರಿಧಾಮದ, ಮಯೂರ ಸಭಾಂಗಣದಲ್ಲಿ, ಇದೇ 19ನೇ ತಾರೀಖು, ಮಧ್ಯಾಹ್ನ 2 ಗಂಟೆಗೆ, 13ನೇ ಸಚಿವ ಸಂಪುಟ ಸಭೆ ನಡೆಯಲಿದೆ. ಅಪರ ಕಾರ್ಯದರ್ಶಿ ಆರ್.ಚಂದ್ರಶೇಖರ, ಈ ಕುರಿತು ಅಧಿಕೃತ ಸುತ್ತೋಲೆ ಹೊರಡಿಸಿ, ಸಭೆಯ ಕಾರ್ಯಸೂಚಿ ಪ್ರತ್ಯೇಕವಾಗಿ, ಪ್ರಕಟಗೊಳ್ಳಲಿದೆ ಎಂದರು.

<><><>

**3.** ಬೆಳಗಾವಿ ಜಿಲ್ಲೆ, ಸವದತ್ತಿಯ ಶ್ರೀ ಎಲ್ಲಮ್ಮನ ಗುಡ್ಡದಲ್ಲಿ, ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು, ಶೀಘ್ರ ಆರಂಭಿಸಲಾಗುವುದು ಎಂದು, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಶ್ರೀ ಎಲ್ಲಮ್ಮನ ಗುಡ್ಡದ ಕಾಮಗಾರಿಗಳ ಸಮಗ್ರ ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು. ಕೇಂದ್ರದ 'ಪ್ರಸಾದ ಯೋಜನೆ' ಅಡಿ, ಎರಡು ಬಹುಪಯೋಗಿ ಕಟ್ಟಡಗಳನ್ನು, ನಿರ್ಮಿಸಲಾಗುತ್ತಿದೆ, ಎಂದರು.

<><><>

**4.** ರೈತರು ಕೃಷಿ ಭೂಮಿಯನ್ನು ಹದಗೊಳಿಸಲು, ವಿಜ್ಞಾನಿಗಳ ಸಲಹೆ ಪಡೆಯುವುದು ಲಾಭದಾಯಕ ಎಂದು, ರಾಯಚೂರು ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯ, ಪ್ರಗತಿ ಪರ ರೈತ, ತಿಮ್ಮಣ್ಣ ಚೌಡಿ ಹೇಳಿದ್ದಾರೆ.

ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನದ ಅಂಗವಾಗಿ, ಕೊಪ್ಪಳ ಜಿಲ್ಲೆ, ತಳಕಲ್ಲ ಗ್ರಾಮದಲ್ಲಿ ನಡೆದ, ಕಾರ್ಯಕ್ರಮದಲ್ಲಿ ಅವರು ತಮ್ಮ ಅನುಭವ ಹಂಚಿಕೊಂಡರು.

<><><>

ಕೊಪ್ಪಳ ಜಿಲ್ಲೆ, ಗಂಗಾವತಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ, ಬೀಜತಳಿ ವಿಜ್ಞಾನಿ ಜ್ಯೋತಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಕೃಷಿ ವಿಜ್ಞಾನಿ ಜ್ಯೋತಿ ಧ್ವನಿ 30 ಸೆಕೆಂದುಗಳು

<><><>

5. ಉಡುಪಿ ಜಿಲ್ಲೆ, ಹೆಣ್ಣು-ಗಂಡು ಲಿಂಗಾನುಪಾತದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ ಎಂದು, ಜಿಲ್ಲಾಧಿಕಾರಿ ಕೆ.ವಿದ್ಯಾಕುಮಾರಿ ತಿಳಿಸಿದ್ದಾರೆ. ಮಣಿಪಾಲ ರಜತಾದ್ರಿಯ, ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 2024-25ನೇ ಸಾಲಿನಲ್ಲಿ, ಸಾವಿರ ಗಂಡು ಮಕ್ಕಳಿಗೆ, 978 ಹೆಣ್ಣು ಮಕ್ಕಳ ಜನನದ ಅನುಪಾತವಿದೆ ಎಂದರು.

<><><>

6. ಬಳ್ಳಾರಿಯ, ಶ್ರೀ ಪಾರ್ಶ್ವನಾಥ ಜೈನ ಶ್ವೇತಾಂಬರ ಮಂದಿರದ, ಶತಮಾನೋತ್ಸ ಸಂಸ್ಮರಣೆ ಹಿನ್ನೆಲೆ, ಅಂಚೆ ಇಲಾಖೆ, ವಿಶೇ ’ ಅಂಚೆ ಲಕೋಟೆ, ಬಿಡುಗಡೆ ಮಾಡಿದೆ. ಬಳ್ಳಾರಿ ಜಿಲ್ಲೆ, ಅಂಚೆ ಅಧೀಕ್ಷಕ ಪಿ. ಚಿದಾನಂದ ಮಾತನಾಡಿ, ಜೈನ ವಾಸ್ತು ಶಿಲ್ಪದ ವೈಶಿಷ್ಟ್ಯತೆ ಹೊಂದಿ, ಶತಮಾನದ ಸಂಭ್ರಮದಲ್ಲಿರುವ, ಜೈನ ಮಂದಿರದ ವಿಶೇ ’ ಲಕೋಟೆ, ಜಗತ್ತಿಗೆ ಬಳ್ಳಾರಿಯ ಸಾಂಸ್ಕೃತಿಕ ಹಿರಿಮೆಯನ್ನು ಪಸರಿಸಲಿದೆ ಎಂದರು. ಬಳ್ಳಾರಿ ಜೈನ ಶ್ವೇತಾಂಬರ ಸಂಘದ ಅಧ್ಯಕ್ಷ ಉತ್ಸವಲಾಲ್ ಬಾಗ್ರೇಚಾ ಸೇರಿದಂತೆ, ಸಮಾಜದ ಗಣ್ಯರು ಪಾಲ್ಗೊಂಡಿದ್ದರು.

<><><>

7. ಬಿಜೆಪಿ ಮುಖಂಡ, ಯೋಗೀಶಗೌಡ ಗೌಡರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ, ಧಾರವಾಡ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ, ವಿನಯ ಕುಲಕರ್ಣಿ ಅವರಿಗೆ ಮುಂಜೂರು ಮಾಡಿದ್ದ, ಜಾಮೀನನ್ನು ಸರ್ವೋಚ್ಚ ನ್ಯಾಯಾಲಯ, ರದ್ದು ಪಡಿಸಿದೆ. ಪ್ರಕರಣದ ಸಾಕ್ಷಿಗಳನ್ನು ಸಂಪರ್ಕಿಸಲು ಹಾಗೂ ಅವರ ಮೇಲೆ ಪ್ರಭಾವ ಬೀರಲು, ಪ್ರಯತ್ನಿಸಿ, ಜಾಮೀನಿನ ಶರತ್ತು ಉಲ್ಲಂಘಿಸಿದ ಹಿನ್ನೆಲೆ, ಜಾಮೀನು ರದ್ದು ಪಡಿಸಲಾಗಿದೆ ಎಂದು, ಸುಪ್ರೀಂ ಕೋರ್ಟ್ ತಿಳಿಸಿದೆ.

<><><>

8. ಹಾವೇರಿ ಜಿಲ್ಲೆ, ಹೊಸರಿತ್ತಿ ಗ್ರಾಮದ, ಗಾಂಧಿ ಗ್ರಾಮೀಣ ಗುರುಕುಲದಲ್ಲಿ, ಗುದ್ಲೆಪ್ಪ ಹಳ್ಳಿಕೇರಿ ಅಧ್ಯಯನ ಪೀಠ ಸ್ಥಾಪಿಸಲು, ಹಾವೇರಿ ವಿಶ್ವವಿದ್ಯಾಲಯ ಯೋಜಿಸಿದೆ ಎಂದು, ಉಪ ಕುಲಪತಿ, ಸುರೇಶ ಜಂಗಮಶೆಟ್ಟಿ ತಿಳಿಸಿದ್ದಾರೆ.

ಹೊಸರಿತ್ತಿಯಲ್ಲಿ ಆಯೋಜಿಸಿದ್ದ, ಗುದ್ಲೆಪ್ಪ ಹಳ್ಳಿಕೇರಿ ಅವರ, 120ನೇ ಜಯಂತ್ಯುತ್ಸವದಲ್ಲಿ ಪಾಲ್ಗೊಂಡು, ಸಂಯುಕ್ತ ಕರ್ನಾಟಕದ ಕಾರ್ಯನಿರ್ವಾಹಕ ಸಂಪಾದಕ ಮೋಹನ ಹೆಗಡೆ ಅವರಿಗೆ, ಪ್ರಶಸ್ತಿ ಪ್ರದಾನಿಸಿ, ಮಾತನಾಡಿದರು.

<><><>

09. ರಾಜ್ಯ ವಿಧಾನ ಪರಿಷತ್ತಿನ, ನಾಲ್ಕು ನಾಮನಿರ್ದೇಶಿತ ಸ್ಥಾನಗಳಿಗೆ, ದಿನೇಶ ಅಮೀನ ಮಟ್ಟು, ಆರತಿ ಕೃಷ್ಣ, ರಮೇಶ ಬಾಬು ಹಾಗೂ ಡಿಜಿ. ಸಾಗರ್ ಅವರ ಹೆಸರನ್ನು ಅಂತಿಮಗೊಳಿಸಿ, ರಾಜ್ಯ ಸರ್ಕಾರ ಪಟ್ಟಿಯನ್ನು, ರಾಜ್ಯಪಾಲರಿಗೆ ರವಾನಿಸಿದೆ ಎಂದು, ವರದಿಯಾಗಿದೆ.

<><><>

**10. 13. ಹುಬ್ಬಳ್ಳಿಯ, ಕರ್ನಾಟಕ ಜಾನಪದ ಜಗತ್ತು ಟ್ರಸ್ಟಿನ ಶಾಂತಾ ಸಂಗನಗೌಡ ಜಕ್ಕನಗೌಡರ 2024–25ನೇ ಸಾಲಿನ ದತ್ತಿ ಪ್ರಶಸ್ತಿಗೆ, ಜೇವಿ ಕಲಾಬಳಗದ ಅಧ್ಯಕ್ಷ, ಗದಿಗೆಯ್ಯ ಹಿರೇಮಠ ಭಾಜನರಾಗಿದ್ದಾರೆ ಎಂದು, ಅಧ್ಯಕ್ಷ ರಾಮಣ್ಣ ಮೂಲಗಿ ತಿಳಿಸಿದ್ದಾರೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**

<><><>